



ಅಂದರೆ 2019ರಲ್ಲಿ 'ಗಾಳಿಪಟ 2' ಸಿನಿಮಾದಲ್ಲಿ ನಟಿಸುವ ಅವಕಾಶ ಅವರಿಗೆ ಸಿಕ್ಕಿತು.

'ಗಾಳಿಪಟ 2' ಸಿನಿಮಾದಲ್ಲಿ ನಟಿಸಿದ್ದೊಂದು ಅಪೂರ್ವ ಅನುಭವ. ಯೋಗರಾಜ್ ಭಟ್ ಅವರು ತುಂಬ ಒಳ್ಳೆಯ ನಿರ್ದೇಶಕರು; ಅಷ್ಟೇ ಒಳ್ಳೆಯ ವ್ಯಕ್ತಿ. ಸೆಟ್‌ನಲ್ಲಿ ಅವರು ಖುಷಿ ಖುಷಿಯಾಗಿ ಎಲ್ಲರ ಕಾಲೆಳೆದುಕೊಂಡು ನಗಿಸುತ್ತ ಇರುತ್ತಾರೆ. ಹಾಗಾಗಿ ಅವರ ಜೊತೆ ಕೆಲಸ ಮಾಡುವುದು ಕಷ್ಟ ಎಂದು ಅನಿಸಲೇ ಇಲ್ಲ. ಹಾಗೆಯೇ ಗಣೇಶ್ ಜೊತೆಗೆ ನಟಿಸಿದ್ದೂ ಒಳ್ಳೆಯ ಅನುಭವ. ಬೇರೆ ಬೇರೆ ಜಾಗಗಳು, ಬೇರೆ ಬೇರೆ ಕಾಲಮಾನಗಳಲ್ಲಿ ನಟಿಸಿದ್ದು ಹೊಸ ರೀತಿಯ ಅನುಭವ ಕೊಟ್ಟಿತು. ಅನಂತ್‌ನಾಗ್ ಅವರಂಥ ಹಿರಿಯ ನಟರಿಂದ ಸಾಕಷ್ಟು ಕಲಿತಿದ್ದೇನೆ. 2019ರಲ್ಲಿ ಶುರುವಾದ ಆ ಸಿನಿಮಾ ಕೋವಿಡ್ ಕಾರಣಕ್ಕೆ ತುಂಬ ತಡವಾಗಿ ಮುಗಿಯಿತು. 2022ರಲ್ಲಿ ತೆರೆಕಂಡಿತು. ಸಿನಿಮಾ ತಡವಾಗಿ ತೆರೆಕಂಡಿತು ಎಂಬ ಬೇಸರವನ್ನು ಚಿತ್ರದ ದೊಡ್ಡ ಗೆಲುವು ಪೂರ್ತಿಯಾಗಿ ಮರೆಸಿದೆ' ಎಂದು ಉತ್ಸಾಹದಿಂದ 'ಗಾಳಿಪಟ 2' ಸಿನಿಮಾದ ಬಗ್ಗೆ ಮಾತಾಡುತ್ತಾರೆ ವೈಭವಿ.

ಈಗ ಅವರ ನಟನೆಯ ಮೂರನೇ ಸಿನಿಮಾ 'ಮಾರ್ಟಿನ್' ತಯಾರಾಗುತ್ತಿದೆ. ಆ ಸಿನಿಮಾದ ಕುರಿತೂ ವೈಭವಿಗೆ ಸಾಕಷ್ಟು ನಿರೀಕ್ಷೆಗಳಿವೆ. "'ಗಾಳಿಪಟ 2' ಸಿನಿಮಾದಲ್ಲಿ ನನ್ನದು ಅಂತರ್ಮುಖಿ ಹುಡುಗಿಯ ಪಾತ್ರ. ಆದರೆ ನಾನು ಸ್ವಭಾವತಃ ಮಾತುಗಾರ್ತಿ. ಚಟಪಟ ಮಾತಾಡುತ್ತಲೇ ಇರುತ್ತೇನೆ. ನನ್ನ ಸ್ವಭಾವಕ್ಕೆ ಸರಿಹೊಂದುವಂಥ ಪಾತ್ರ 'ಮಾರ್ಟಿನ್' ಸಿನಿಮಾದಲ್ಲಿ ಸಿಕ್ಕಿದೆ. ಧೈರ್ಯವಂತ, ಚಾಲಾಕಿ ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಧ್ರುವ ಸರ್ಜಾ ಜೊತೆಗೆ ನಟಿಸುತ್ತಿರುವುದೂ ಖುಷಿಯ ಸಂಗತಿ" ಎನ್ನುವ ವೈಭವಿ ಅವರಿಗೆ ಗಾಂಧಿನಗರದಲ್ಲಿ ಸಾಕಷ್ಟು ಅವಕಾಶಗಳು ಬರತೊಡಗಿವೆ.

'ನಟನೆಯನ್ನು ಯಾವುದೇ ತರಬೇತಿ ಶಾಲೆಗಳಲ್ಲಿ, ಕೋರ್ಸುಗಳಲ್ಲಿ ಕಲಿಸಲು ಸಾಧ್ಯವೇ ಇಲ್ಲ. ಅದನ್ನು ನಮಗೆ ನಾವೇ ಕಲಿಸಿಕೊಳ್ಳಬೇಕು. ಅದೊಂದು ನಿರಂತರವಾದ ಪ್ರಕ್ರಿಯೆ' ಎನ್ನುವ ಅವರಿಗೆ ಮಹಿಳಾಪ್ರಧಾನ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುವ ಬಯಕೆ ಇದೆ. ಕನ್ನಡದಲ್ಲಿ ಅವಕಾಶಗಳು ಸಿಗುತ್ತಿರುವ ಬಗ್ಗೆ ತುಂಬ ಖುಷಿಯಿಂದ ಮಾತಾಡುವ ವೈಭವಿ, ಆದಷ್ಟೂ ಬೇಗ ಕನ್ನಡ ಭಾಷೆಯನ್ನು ಸಂಪೂರ್ಣವಾಗಿ ಕಲಿತು ಕನ್ನಡದಲ್ಲಿಯೇ ಮಾತಾಡುವ ಭರವಸೆಯನ್ನೂ ನೀಡುತ್ತಾರೆ. ■

# ಗಜರಾಮನಾದ ರಾಜವರ್ಧನ್!

ಹಿರಿಯ ನಟ ಡಿಂಗ್ರಿ ನಾಗರಾಜ್ ಅವರ ಪುತ್ರ ರಾಜವರ್ಧನ್ ನಾಯಕನಾಗಿ ಚಂದನವನದಲ್ಲಿ ಬೇರೂರಲು ಸತತವಾಗಿ ಪ್ರಯತ್ನಿಸುತ್ತಿದ್ದಾರೆ. 2020ರಲ್ಲಿ 'ಬಿಚ್ಚುಗತ್ತಿ' ಸಿನಿಮಾದ ಮೂಲಕ ಬೆಳ್ಳಿತೆರೆಯ ಮೇಲೆ ನಾಯಕನಟನಾಗಿ ಸಹಿ ಹಾಕಿದ ರಾಜವರ್ಧನ್ ಅವರ 'ಪ್ಲೈ' ಎಂಬ ಸಿನಿಮಾ ಇದೇ ವರ್ಷ ಬಿಡುಗಡೆಯಾಗಿತ್ತು. ಈ ಎರಡೂ ಸಿನಿಮಾಗಳು ಗಲ್ಲಾಪೆಟ್ಟಿಗೆಯಲ್ಲಿ ಸದ್ದು ಮಾಡಿದ್ದು ಅಷ್ಟಕ್ಕಷ್ಟೆ. ಹಾಗೆಂದು ಅವಕಾಶಗಳಿಗೇನೂ ಬರ ಬಂದಿಲ್ಲ. ಖಡಕ್ ಲುಕ್‌ನ ಸದೃಢ ಮೈಕಟ್ಟಿನ ರಾಜವರ್ಧನ್ ಅಭಿನಯದ ಸಿನಿಮಾಗಳು ಸೆಟ್ಟೇರುತ್ತಲೇ ಇವೆ. ಇತ್ತೀಚೆಗಷ್ಟೇ ಅವರು ನಾಯಕನಾಗಿ ನಟಿಸುತ್ತಿರುವ 'ಹಿರಣ್ಯ' ಎಂಬ ಸಿನಿಮಾ ಘೋಷಣೆಯಾಗಿತ್ತು. ಖಡಕ್ ಮಾಸ್ ಲುಕ್‌ನ ಪೋಸ್ಟರ್ ಕೂಡ ಸಾಕಷ್ಟು ಸದ್ದು ಮಾಡಿತ್ತು. ಈಗ ಅಷ್ಟೇ ಖತರ್‌ನಾಕ್ ಪಾತ್ರದಲ್ಲಿ ನಟಿಸುತ್ತಿರುವ ಮತ್ತೊಂದು ಸಿನಿಮಾ ಕೂಡ ಘೋಷಣೆಯಾಗಿದೆ. ಈ ಸಿನಿಮಾದ ಹೆಸರು 'ಗಜರಾಮ'.

ಸುನೀಲ್ ಕುಮಾರ್ ವಿ.ಎ. ಎಂಬವರು ನಿರ್ದೇಶಿಸುತ್ತಿರುವ ಈ ಸಿನಿಮಾದ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಆಗಿದೆ. ಸುನೀಲ್ ಅವರಿಗೆ ಯೋಗರಾಜ್ ಭಟ್, ಸೂರಿ ಸೇರಿದಂತೆ ಒಂದಿಷ್ಟು ನಿರ್ದೇಶಕರ ಜೊತೆಯಲ್ಲಿ ಸಹಾಯಕನಾಗಿ ಕೆಲಸ ಮಾಡಿದ ಅನುಭವವಿದೆ. ಈ ಸಿನಿಮಾದ ಮೂಲಕ ಅವರು ಪೂರ್ಣಪ್ರಮಾಣದಲ್ಲಿ ನಿರ್ದೇಶನ ಮಾಡುತ್ತಿದ್ದಾರೆ. 'ಗಜರಾಮ'ನಿಗೆ ಮೆಲೊಡಿ ಮಾಸ್ಟರ್ ಮನೋಮೂರ್ತಿ ಸಂಗೀತ ನಿರ್ದೇಶನ ಮಾಡುತ್ತಿರುವುದು ವಿಶೇಷ. ಕೆ.ಎಸ್. ಚಂದ್ರಶೇಖರ್ ಛಾಯಾಗ್ರಹಣ ಮಾಡುತ್ತಿದ್ದಾರೆ. ■

